**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಪ್ರತಿವಾದಿ ಪರವಾಗಿ ಶ್ರೀ ಟಿ.ಎಂ.ಎ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಡಿ.–2 | ಹದ್ದು ಬಸ್ತು ನಕಾಶೆ |
| ನಿ.ಡಿ.–3 ಮತ್ತು 4 | ಮ್ಯೂಟೇಷನ್ ಗಳು |
| ನಿ.ಡಿ.–5 | ಪಹಣಿ |
| ನಿ.ಡಿ.–6 | ಮರಣ ಪ್ರಮಾಣ ಪತ್ರ |

**ಈ ಹಂತದಲ್ಲಿ ಸಾಕ್ಷಿ ಕಡೆಯಿಂದ ಮತ್ತಷ್ಟು ದಾಖಲೆಗಳನ್ನು ಹಾಜರು ಪಡಿಸುವ ಸಲುವಾಗಿ ಪ್ರತಿವಾದಿ ಪರ ವಕೀಲರು ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**